# ಕರ್ನಾಟಕ ಸರ್ಕಾರ
## ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

ಸಂಖ್ಯೆ:ಮಮಅಇ/ಐಸಿಪಿಎಸ್/ಪಿ/ದತ್ತು-16/2010-11

ಕೇರಾಫ್ ಆಯುಕ್ತರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
1ನೇ ಮಹಡಿ, ಬಹುಮಹಡಿ ಕಟ್ಟಡಗಳ ಸಂಕೀರ್ಣ
ಡಾ: ಅಂಬೇಡ್ಕರ್ ಬೀದಿ, ಬೆಂಗಳೂರು-01
ದಿನಾಂಕ: 26.10.2012

29/10

**ಸುತ್ತೋಲೆ**

ವಿಷಯ: ವಿಶೇಷ ದತ್ತು ಕೇಂದ್ರಗಳು ತೊಟ್ಟಿಲ ಕಂದನ ಸ್ವಾಗತ ಕೇಂದ್ರ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವ ಬಗ್ಗೆ

ಉಲ್ಲೇಖ: 1.ಕೇಂದ್ರ ಸರ್ಕಾರದ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳು ಅಧ್ಯಾಯ 3.3ರಂತೆ ತೆಗೆದುಕೊಳ್ಳಬೇಕಾದ ಕ್ರಮಗಳು

2.ಕೇಂದ್ರ ಸರ್ಕಾರ ಹೊರಡಿಸಿರುವ ಮಕ್ಕಳ ದತ್ತು ನೀಡಿಕೆ ನಿಯಂತ್ರಣ ಮಾರ್ಗಸೂಚಿಗಳು 2011

3.ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:12-4/2011-ಸಿಡಬ್ಲೂ-II ದಿನಾಂಕ 2-5-2012

*****

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಿಷಮ ಪರಿಸ್ಥಿತಿಗಳಲ್ಲಿ ಬದುಕುವ ಅನಾಥ, ಪರಿತ್ಯಕ್ತ ಮಕ್ಕಳ ಪಾಲನೆ ಪೋಷಣೆಗೆ ಸೂಕ್ತ ಸೌಲಭ್ಯಗಳು ಇಲ್ಲದ ಕಾರಣ ಹಾಗೂ ಇಂತಹ ದುರ್ಬಲ ಮಕ್ಕಳು ಸಾಗಾಣಿಕೆಗೆ ಸುಲಭವಾಗಿ ಬಲಿಪಶುಗಳಾಗುವ ಪ್ರಮೇಯಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಮಾರ್ಗಸೂಚಿಗಳನ್ವಯ ಹಾಗೂ ಕೇಂದ್ರ ಸರ್ಕಾರ ಹೊರಡಿಸಿರುವ ಮಕ್ಕಳ ದತ್ತು ನೀಡಿಕೆ ನಿಯಂತ್ರಣ ಮಾರ್ಗಸೂಚಿಗಳು 2011ರನ್ವಯ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ದತ್ತು ಕೇಂದ್ರಗಳು ತೊಟ್ಟಿಲ ಕಂದನ ಸ್ವಾಗತ ಕೇಂದ್ರ ಪ್ರಾರಂಭಿಸಬೇಕಾಗಿರುತ್ತದೆ.

ಪರಿತ್ಯಕ್ತ ಮಗುವಿನ ಸುರಕ್ಷೆ, ಅಭಿರಕ್ಷೆ, ಹಾಗೂ ಈ ಮಗುವನ್ನು ದತ್ತು ನೀಡುವವರೆಗೆ ಮಮತೆಯಿಂದ ಪಾಲನೆ, ಪೋಷಣೆ ಮತ್ತು ಆರೈಕೆ ಮಾಡುವುದು ಸ್ವಾಗತ ಕೇಂದ್ರದ ಪ್ರಾಥಮಿಕ ಉದ್ದೇಶ.

ವಿಶೇಷ ದತ್ತು ಕೇಂದ್ರಗಳು ತಮ್ಮ ಸಂಸ್ಥೆಯ ಮುಖ್ಯ ದ್ವಾರದಲ್ಲಿ ಹಾಗೂ ತಮ್ಮ ವ್ಯಾಪ್ತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿ ಹಾಗೂ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಅಲ್ಪಾವಧಿ ಗೃಹಗಳಲ್ಲಿ, ಸ್ವಾಧಾರ ಕೇಂದ್ರಗಳಲ್ಲಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳ ಕಛೇರಿಯಲ್ಲಿ ನಿಗದಿಸಿದ ಸ್ಥಳಗಳಲ್ಲಿ ತೊಟ್ಟಿಲುಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿದೆ. ಆಸ್ಪತ್ರೆಗಳು ಹಾಗೂ ಖಾಸಗಿ ನರ್ಸಿಂಗ್ ಹೋಂಗಳು ಈ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಕೋರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಕೋರಲಾಗುತ್ತಿದೆ.

ಸ್ವಾಗತ ಕೇಂದ್ರ ಪ್ರಾರಂಭಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳು.

(1) ಅನಾಥ, ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳ ಸುರಕ್ಷತೆಗಾಗಿ ವಿಶೇಷ ದತ್ತು ಸಂಸ್ಥೆಗಳು ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂ ಗಳ ಸಹಕಾರದಿಂದ ತೊಟ್ಟಿಲ ಘಟಕಗಳನ್ನು ತೆರೆಯಲು ಕ್ರಮವಹಿಸತಕ್ಕದ್ದು.

(2) ಪ್ರತಿಯೊಂದು ವಿಶೇಷ ದತ್ತು ಸಂಸ್ಥೆಯು ತಮ್ಮ ಸಂಸ್ಥೆಯ ಆವರಣದಲ್ಲಿ ತೊಟ್ಟಿಲ ಸ್ಥಳವನ್ನು ನಿಗದಿಪಡಿಸಿ ಅಲ್ಲಿ ತೊಟ್ಟಿಲನ್ನು ಇಡತಕ್ಕದ್ದು, ಹಾಗು ಈ ಬಗ್ಗೆ ವ್ಯಾಪಕ ಪ್ರಚಾರ ಮಾಡತಕ್ಕದ್ದು.

(3) ಇದರ ಜೊತೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಕಾರದೊಂದಿಗೆ ಸರ್ಕಾರಿ/ಖಾಸಗಿ ಆಸ್ಪತ್ರೆ, ಅಲ್ಪಾವಧಿ ಮಹಿಳೆಯರ ವಸತಿಗೃಹ/ಸ್ವಾಧಾರ ಕೇಂದ್ರ/ಸ್ವಾಧಾರ ಸ್ವಾಗತ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಇತ್ಯಾದಿ ಸ್ಥಳಗಳನ್ನು ತೊಟ್ಟಿಲ ಘಟಕಗಳ ಸ್ಥಳಗಳನ್ನಾಗಿ ಗುರುತಿಸಿ ಅಲ್ಲಿ ತೊಟ್ಟಿಲನ್ನು ಸ್ಥಾಪಿಸಿ ಅನಾಥ, ನಿರ್ಗತಿಕ, ಬೇಡದ ಮಕ್ಕಳನ್ನು ಸ್ವೀಕರಿಸಿ ಮಕ್ಕಳಿಗೆ ಪುನರ್ವಸತಿಯನ್ನು ಕಲ್ಪಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

ತೊಟ್ಟಿಲ ಘಟಕದ ಸ್ಥಳದಿಂದ ಮಗುವನ್ನು ಸ್ವೀಕರಿಸಿದ ನಂತರ ಈ ಕೆಳಕಂಡ ಸೂಕ್ತ ಕ್ರಮಗಳನ್ನು ಮಗುವಿನ ಹಿತರಕ್ಷಣೆಗಾಗಿ ತೆಗೆದುಕೊಳ್ಳತಕ್ಕದ್ದು.

ಅ. ಮಗುವನ್ನು ಸ್ವೀಕರಿಸಿದ ಕೂಡಲೆ ಅಗತ್ಯವಾದ ವೈದ್ಯಕೀಯ ಸೇವೆಯನ್ನು ಒದಗಿಸತಕ್ಕದ್ದು, ವೈದ್ಯಾಧಿಕಾರಿಯವರ ಮಾರ್ಗದರ್ಶನದಂತೆ ಆಹಾರವನ್ನು ಮಗುವಿಗೆ ನೀಡತಕ್ಕದ್ದು.

ಆ. ಮಗುವನ್ನು ಸ್ವೀಕರಿಸಿದ ಬಗ್ಗೆ ಸ್ಥಳೀಯ ಪೋಲೀಸರಿಗೆ ಹಾಗೂ ಮಕ್ಕಳ ಕಲ್ಯಾಣ ಸಮಿತಿಗೆ ವರದಿ ನೀಡುವುದು.

ಇ. ಮಗುವಿಗೆ ಅಗತ್ಯವಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು.

ಈ. ಮಗುವಿಗೆ ಸೂಕ್ತವಾದ ರಕ್ಷಣೆ ಮತ್ತು ಪಾಲನೆಯ ವ್ಯವಸ್ಥೆಯನ್ನು ಕಲ್ಪಿಸುವುದು.

ಉ. ಮಗುವಿನ ಜನನ ಪ್ರಮಾಣ ಪತ್ರವನ್ನು ಪಡೆಯಲು ಸಕ್ಷಮ ಪ್ರಾಧಿಕಾರಕ್ಕೆ ಅರ್ಜಿಸಲ್ಲಿಸುವುದು.

ಊ. ದತ್ತು ನೀಡುವುದರ ಮೂಲಕ ಮಗುವನ್ನು ಒಂದು ಕುಟುಂಬದಲ್ಲಿ ಸೇರಿಸುವ ಸಾಧ್ಯತೆ ಬಗ್ಗೆ ಶ್ರಮಿಸಬೇಕು.

ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಕೂಡಲೇ ವರದಿ ಕಳುಹಿಸಲು ಕೋರಿದೆ.

ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ,
ಬೆಂಗಳೂರು 560001

ಇವರಿಗೆ:

1. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲೆಗಳ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ. ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ವಿಶೇಷ ದತ್ತು ಸಂಸ್ಥೆಗಳು ಇವರ ಸೂಕ್ತ ಕ್ರಮಕ್ಕಾಗಿ.